ಅವರ ಸದಸ್ಯತ್ವ ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುತ್ತಾರೆ.

ರಸ್ತೆ ದುಸ್ಥಿತಿ

289 (542) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ):– ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಿಂಧನೂರು–ತಾವರಗೇರು ರಸ್ತೆಯು ಸಂಪೂರ್ಣ ಹಾಳಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸದರಿ ರಸ್ತೆಯ ದುರಸ್ಥಿ – ಕಾಮಗಾರಿಯನ್ನು ಕೆಶಿಪ್ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದ್ದು, ತದನಂತರ ಕೈ ಬಿಡಲಾಗಿದ್ದಕ್ಕೆ ಕಾರಣಗಳೇನು ;

ಇ) ಸದರಿ ರಸ್ತೆಯ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರವು ಬಯಸಿದೆಯೇ ;

ಈ) ಯಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದು ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಎಸ್.ಓ.ಎಸ್. ಅಧ್ಯಯನದ ಅಡಿಯಲ್ಲಿ ಒಟ್ಟು 3411 ಕಿ.ಮೀ. ಉದ್ದದ ರಸ್ತೆಗಳನ್ನು ಕೆಶಿಪ್ ಅಡಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು ಆದರೆ ವಿಶ್ವಬ್ಯಾಂಕ್/ ಏಶಿಯನ್ ಡೆವಲಪ್ ಬ್ಯಾಂಕ್ ಜೊತೆಗೆ ಹಣಕಾಸಿನ ನೆರವಿಗಾಗಿ ಸಂಧಾನ ಮಾಡಿದಾಗ ಕೇವಲ 1441 ಕಿ.ಮೀ. ಗಳಿಗೆ ಹಣಕಾಸಿನ ನೆರವು ದೊರಕಿದ್ದು, ಹೀಗಾಗಿ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿರುವುದಿಲ್ಲ.

ಇ) ಸಿಂಧನೂರು–ಹೇಮ್ಮರಗಾರ ರಾಜ್ಯ ಹೆದ್ದಾರಿ 30ರ ಅಡಿಯಲ್ಲಿ ಉತ್ತರ ವಲಯದ ವ್ಯಾಪ್ತಿಯಲ್ಲಿ ಸಿಂಧನೂರು – ತಾವರೆಗೆರೆ ರಸ್ತೆಯು 40 ಕಿ.ಮೀ. ಉದ್ದವಿರುತ್ತದೆ. ಇದರಲ್ಲಿ

1. ಚೈ. 30.00 ಕಿ.ಮೀ. ನಿಂದ ಚೈ. 35.00 ಕಿ.ಮೀ. ವರೆಗೆ ರೂ. 49.00

ಲಕ್ಷಗಳಲ್ಲಿ ರಾಜ್ಯ ಹೆದ್ದಾರಿ ನವೀಕರಣ ಅಡಿಯಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

2. ಚೈ. 35.00 ಕಿ.ಮೀ. ನಿಂದ ಚೈ. 40.00 ಕಿ.ಮೀ ವರೆಗೆ ಗುಂಡಿಮುಚ್ಚುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

3. ಚೈ. 03.00 ಕಿ.ಮೀ. ನಿಂದ ಚೈ. 18.00 ಕಿ.ಮೀ. ವರೆಗಿನ ರಸ್ತೆಯಲ್ಲಿ 4 ಕಿ.ಮೀ. ರಸ್ತೆಯ ಆಯ್ದ ಭಾಗಗಳಲ್ಲಿ ಬಲಪಡಿಸುವಿಕೆ ಕಾಮಗಾರಿಗೆ 2011–12ನೇ ಸಾಲಿನಲ್ಲಿ ರೂ. 90.00 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

4. ಇನ್ನುಳಿದ 26 ಕಿ.ಮೀ. ರಸ್ತೆಯನ್ನು ತಾತ್ಕಾಲಿಕ ದುರಸ್ಥಿಗಾಗಿ ರೂ. 320.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು

290 (623) ಶ್ರೀ ರಹೀಂ ಖಾನ್ (ಬೀದರ್):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್ ಜಿಲ್ಲೆಯ ಬೀದರ್ ನಗರದಲ್ಲಿ ಯಾವ ಯಾವ ರಸ್ತೆ ಅಗಲೀಕರಣವಾಗಿವೆ ; ಇನ್ನು ಎಷ್ಟು ರಸ್ತೆಗಳು ಅಗಲೀಕರಣ ಮಾಡಲಾಗುವುದು ; ಅವು ಯಾವುವು (ಮಾಹಿತಿ ನೀಡುವುದು) ;

ಆ) ಈ ರಸ್ತೆ ಅಗಲೀಕರಣದಲ್ಲಿ ಸುಮಾರು ಹತ್ತು ಸಾವಿರ ಕುಟುಂಬಗಳು ಮನೆ ಮತ್ತು ಅಂಗಡಿ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಈ ಬಡ ಕುಟುಂಬಗಳಿಗೆ ಪರಿಹಾರ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ಮಾಹಿತಿ ನೀಡುವುದು)

ಇ) ಅವರಿಗೆ ಯಾವಾಗ ಹಾಗೂ ಎಷ್ಟು ಪರಿಹಾರ ಒದಗಿಸಲಾಗುವುದು (ಮಾಹಿತಿ ನೀಡುವುದು) ?

ಶ್ರೀ ಬಾಲಚಂದ್ರ ಲಕ್ಷಣರಾವ್ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–